**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ**

**ಸಿ.ಸಿ. ಸಂಖ್ಯೆ: 394/2024**

**ಪಿರ್ಯಾದಿದಾರರು:** ರಾಜ್ಯಪರ ಪೊಲೀಸರು,
ಚನ್ನರಾಯಪಟ್ಟಣ ನಗರ ಪೊಲೀಸ್ ಠಾಣೆ.

**ವಿರುದ್ಧ**

**ಆರೋಪಿತರು:** ನಾಗರಾಜು ಸಿ.ಡಿ.,
ಬಿನ್ ಲೇಟ್ ಸಿ.ಎನ್. ದಾಸಪ್ಪ,
43 ವರ್ಷ ವಯಸ್ಸು,
ವಾಸ: ರೇವಣ್ಣ ಸರ್ಕಲ್,
ಕಗ್ಗಲಿಕಾವಲು ಗ್ರಾಮ, ಕಸಬಾ ಹೋಬಳಿ,
ಚನ್ನರಾಯಪಟ್ಟಣ ತಾಲ್ಲೂಕು.

**ದೋಷಾರೋಪಣೆ**

**ಶ್ರೀ ದೀಪು ಬಿ.ಸಿ.,** ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಚನ್ನರಾಯಪಟ್ಟಣ, ಆದ ನಾನು ಆರೋಪಿಗಳಾದ ನಿಮ್ಮ ಮೇಲೆ ಹೊರಿಸುವ ದೋಷಾರೋಪಣೆ ಏನೆಂದರೆ,

ದಿನಾಂಕ 26.02.2024 ರಂದು ಮಧ್ಯಾಹ್ನ ಸುಮಾರು 3.00 ಗಂಟೆ ಸಮಯದಲ್ಲಿ, ಚನ್ನರಾಯಪಟ್ಟಣ ನಗರ ಪೋಲೀಸ್ ಠಾಣಾ ಸರಹದ್ದಿಗೆ ಸೇರಿದ, ಶ್ರೀನಿವಾಸಪುರ ಆಸ್ಪತ್ರೆ ಹತ್ತಿರ, ಸಾಕ್ಷಿ.1 ರವರನ್ನು ಆರೋಪಿಯಾದ ನೀವು ಕೆಎ.02.ಸಿ.3202 ನಂಬರಿನ ಆಟೋದಲ್ಲಿ ಹತ್ತಿಸಿಕೊಂಡು ಚನ್ನರಾಯಪಟ್ಟಣ ಟೌನ್ ಗೆ ಬರಲು ಹೊಳೆನರಸೀಪುರ ಚನ್ನರಾಯಪಟ್ಟಣ ರಸ್ತೆ ಕಗ್ಗಲಿ ಕಾವಲು ನೀಲಿಗಿರಿ ಫಾರೆಸ್ಟ್ ಹತ್ತಿರ ಬರುತ್ತಿದ್ದಾಗ, ಆರೋಪಿಯಾದ ನೀವು ಸಾಕ್ಷಿ.1 ರವರ ಕುತ್ತಿಗೆಯಲ್ಲಿದ್ದ ಚಿನ್ನದ ಮಾಂಗಲ್ಯ ಸರವನ್ನು ಕಿತ್ತುಕೊಳ್ಳುವ ಉದ್ದೇಶದಿಂದ, ಆಟೋವನ್ನು ಫಾರೆಸ್ಟ್ ಒಳಗೆ ತಿರುಗಿಸಿದಾಗ, ಸಾಕ್ಷಿ.1 ರವರು ಆಟೋವನ್ನು ಇಲ್ಲಿ ಯಾಕೆ ತಿರುಗಿಸುತ್ತೀಯಾ ಎಂದು ಆಟೋದಿಂದ ಕೆಳಗಿಳಿಯಲು

ಪ್ರಯತ್ನಿಸಿದ್ದು, ಆ ಮೂಲಕ ಆರೋಪಿಯಾದ ನೀವು **ಭಾ.ದಂ.ಸಂ. ಕಲಂಃ 394** ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುತ್ತೀರಿ.

**2**) ಮೇಲೆ ಹೇಳಿದ ದಿನ, ಸ್ಥಳ ಮತ್ತು ಸಮಯದಲ್ಲಿ ಆರೋಪಿಯಾದ ನೀವು ಸಾಕ್ಷಿ.1 ರವರು ಧರಿಸಿದ್ದ ಸೀರೆಯನ್ನು ಹಿಡಿದು ಎಳೆದಾಡಿ ಅವರ ಮಾನಕ್ಕೆ ಕುಂದುಂಟುಮಾಡಿ, ಆ ಮೂಲಕ ಆರೋಪಿಯಾದ ನೀವು **ಭಾ.ದಂ.ಸಂ. ಕಲಂಃ 354** ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುತ್ತೀರಿ.

**3**) ಮೇಲೆ ಹೇಳಿದ ದಿನ, ಸ್ಥಳ ಮತ್ತು ಸಮಯದಲ್ಲಿ ಆರೋಪಿಯಾದ ನೀವು, ಸಾಕ್ಷಿ.1 ರವರನ್ನು ತಡೆದು ನಿಲ್ಲಿಸಿಕೊಂಡು, ನಿಮ್ಮ ಸ್ವಯಂ ಪ್ರೇರಣೆಯಿಂದ ಅಲ್ಲೇ ಬಿದ್ದಿದ್ದ ಕಲ್ಲಿನಿಂದ ಸಾಕ್ಷಿ.1 ರವರ ತಲೆ ಮತ್ತು ಎಡಕಾಲಿನ ಮಂಡಿಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯಪಡಿಸಿ, ಸಾಕ್ಷಿ.1 ರವರ ಕುತ್ತಿಗೆಯಲ್ಲಿದ್ದ 48 ಗ್ರಾಮ ತೂಕದ ಎರಡು ಎಳೆ ಚಿನ್ನದ ಮಾಂಗಲ್ಯ ಸರವನ್ನು ಕಿತ್ತುಕೊಂಡು ಹೋಗಿ, ಆ ಮೂಲಕ ಆರೋಪಿಯಾದ ನೀವು **ಭಾ.ದಂ.ಸಂ. ಕಲಂಃ 392** ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದೊಳಗೆ ಎಸಗಿರುತ್ತೀರಿ.

ಸದರಿ ಆರೋಪಕ್ಕೆ ಆರೋಪಿ/ಗಳಾದ ನೀವು ಈ ನ್ಯಾಯಾಲಯದಲ್ಲಿ ವಿಚಾರಣೆಗೆ ಗುರಿಯಾಗತಕ್ಕದ್ದು ಎಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕಃ **26.12.2024.**

(ದೀಪು ಬಿ.ಸಿ.)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ.

**<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ</u>**

**<u>ಸಿ.ಸಿ. ಸಂಖ್ಯೆಃ 394/2024</u>**

**<u>ಪಿರ್ಯಾದಿದಾರರುಃ</u>** ರಾಜ್ಯಪರ ಪೊಲೀಸರು,
ಚನ್ನರಾಯಪಟ್ಟಣ ನಗರ ಪೊಲೀಸ್ ಠಾಣೆ.

**ವಿರುದ್ಧ**

**<u>ಆರೋಪಿತರುಃ</u>** ನಾಗರಾಜು ಸಿ.ಡಿ.,
ಬಿನ್ ಲೇಟ್ ಸಿ.ಎನ್. ದಾಸಪ್ಪ,
43 ವರ್ಷ ವಯಸ್ಸು,
ವಾಸಃ ರೇವಣ್ಣ ಸರ್ಕಲ್,
ಕಗ್ಗಲಿಕಾವಲು ಗ್ರಾಮ, ಕಸಬಾ ಹೋಬಳಿ,
ಚನ್ನರಾಯಪಟ್ಟಣ ತಾಲ್ಲೂಕು.

**<u>ದೋಷಾರೋಪಣೆ</u>**

**<u>ಪ್ರಶ್ನೆ 1</u>** ಃ ದೋಷಾರೋಪಣೆಯನ್ನು ಓದಿ ಹೇಳಿದ್ದು ಅರ್ಥವಾಯಿತೆ ?

**ಉತ್ತರ** ಃ ಅರ್ಥವಾಯಿತು

**<u>ಪ್ರಶ್ನೆ 2</u>**ಃ ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೆ ?

**ಉತ್ತರ** ಃ ವಿಚಾರಣೆಯಾಗಬೇಕು

(ಸದರಿ ದೋಷಾರೋಪಣೆಯನ್ನು ಆರೋಪಿಗೆ ಓದಿ, ಹೇಳಿ, ಕೇಳಿ ಆರೋಪಿಯು ಕೊಟ್ಟ ಉತ್ತರವನ್ನು ಅವರ ಹೇಳಿಕೆಯಂತೆ ಬರೆದುಕೊಳ್ಳಲಾಯಿತು ಎಂದು ದೃಢೀಕರಿಸಲಾಗಿದೆ.

ದಿನಾಂಕಃ 26.12.2024

(ದೀಪು ಬಿ.ಸಿ.)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ.

**<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ</u>**

**<u>ಸಿ.ಸಿ. ಸಂಖ್ಯೆಃ 962/2019</u>**

**<u>ಪಿರ್ಯಾದಿದಾರರುಃ</u>** ರಾಜ್ಯಪರ ಪೊಲೀಸರು,
ಚನ್ನರಾಯಪಟ್ಟಣ ನಗರ ಪೊಲೀಸ್ ಠಾಣೆ.

**ವಿರುದ್ಧ**

**<u>ಆರೋಪಿತರುಃ</u>** 2. ಕೋಮಲ ಕೋಂ ಚಂದ್ರೇಗೌಡ ಕೆ.ಎಲ್.,
43 ವರ್ಷ ವಯಸ್ಸು,
ವಾಸಃ ಕೆರೆಚಿಕ್ಕೇನಹಳ್ಳಿ ಗ್ರಾಮ,
ಕಸಬಾ ಹೋಬಳಿ,
ಚನ್ನರಾಯಪಟ್ಟಣ ತಾಲ್ಲೂಕು.

**<u>ದೋಷಾರೋಪಣೆ</u>**

**<u>ಪ್ರಶ್ನೆ 1</u>** ಃ ದೋಷಾರೋಪಣೆಯನ್ನು ಓದಿ ಹೇಳಿದ್ದು ಅರ್ಥವಾಯಿತೆ ?

**ಉತ್ತರ** ಃ ಅರ್ಥವಾಯಿತು

**<u>ಪ್ರಶ್ನೆ 2</u>**ಃ ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೆ ?

**ಉತ್ತರ** ಃ ವಿಚಾರಣೆಯಾಗಬೇಕು

(ಸದರಿ ದೋಷಾರೋಪಣೆಯನ್ನು ಆರೋಪಿಗೆ ಓದಿ, ಹೇಳಿ, ಕೇಳಿ ಆರೋಪಿಯು ಕೊಟ್ಟ ಉತ್ತರವನ್ನು ಅವರ ಹೇಳಿಕೆಯಂತೆ ಬರೆದುಕೊಳ್ಳಲಾಯಿತು ಎಂದು ದೃಢೀಕರಿಸಲಾಗಿದೆ.

ದಿನಾಂಕಃ 06.08.2022

(ದೀಪು ಬಿ.ಸಿ.)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚನ್ನರಾಯಪಟ್ಟಣ.